

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬದ್ರ್ ಯುದ್ಧಾನಂತರದ ಘಟನೆಗಳು – ಕೆಲವು ಕಟ್ಟುಕಥೆಗಳ ಅವಲೋಕನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–10–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಸ್ಮಾಳ ವಧೆಯ ಘಟನೆಯ ಬಗ್ಗೆ ಕಳೆದ ಖುತ್ಬದಲ್ಲಿ ಹೇಳಿದ್ದೆ. ಅದೇ ರೀತಿಯ ಮತ್ತೊಂದು ಘಟನೆಯೂ ಇದೆ ಎಂದು ನಾನು ಹೇಳಿದ್ದೆ. ಈ ಎರಡನೇ ಘಟನೆ ಕೂಡ ಕಟ್ಟುಕಥೆಯೆಂದು ತೋರುತ್ತದೆ. ಈ ಘಟನೆ ಯಹೂದಿಯಾದ ಅಬೂಅಫಕ್‌ನ ವಧೆಯ ಘಟನೆಯಾಗಿದೆ.

ಇದನ್ನು ಈ ರೀತಿಯಾಗಿ ವಿವರಿಸಲಾಗಿದೆ: ಒಂದು ದಿನ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ನನಗಾಗಿ ನೀಚನಾದ ಅಬೂಅಫಕನ್ನು ಮುಗಿಸಿಬಿಡುವವರು ಯಾರಿದ್ದಾರೆ? ಅಬೂ ಅಫಕ್ ಎಂಬವನು 120 ವರ್ಷ ಪ್ರಾಯದ ಮುದುಕನಾಗಿದ್ದನು ಎಂದು ಹೇಳಲಾಗುತ್ತದೆ. ಆದರೆ ಆತನು ಜನರನ್ನು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಹುರಿದುಂಬಿಸುತ್ತಿದ್ದನು ಮತ್ತು ತನ್ನ ಪದ್ಯಗಳ ಮೂಲಕ ಹಝ್ರತ್ ಪೈಗಂಬರ್(ಸ)ರ ಬಗ್ಗೆ ಬೈಗುಳ ಮತ್ತು ನಿಂದನೀಯ ಮಾತುಗಳನ್ನು ಹೇಳುತ್ತಿದ್ದನು. ಹಝ್ರತ್ ಪೈಗಂಬರ್(ಸ)ರ ಈ ಮಾತು ಕೇಳಿ ಹಝ್ರತ್ ಸಾಲಿಂ ಬಿನ್ ಉಮೈರ್ ಎದ್ದರು. (ಇವರು ಅಲ್ಲಾಹನ ಭಯದಲ್ಲಿ ಅತೀವವಾಗಿ ಅಳುತ್ತಿದ್ದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಮತ್ತು ಇವರು ಬದ್ರ್ ಯುದ್ಧದಲ್ಲಿ ಕೂಡ ಭಾಗಿಯಾಗಿದ್ದರು). ಅವರು ಹೇಳಿದರು: ನಾನು ಆ ಬಗ್ಗೆ ಪ್ರತಿಜ್ಞೆ ಮಾಡುತ್ತೇನೆ. ಎಂದರೆ ನಾನು ಅಬೂಅಫಕನ್ನು ವಧಿಸುವೆನು ಅಥವಾ ಆ ಪ್ರಯತ್ನದಲ್ಲಿ ತನ್ನ ಜೀವತ್ಯಾಗ ಮಾಡುವೆನು. ಹೀಗೆ ಅವರು ತಕ್ಕ ಸಂದರ್ಭವನ್ನು ಹುಡುಕುತ್ತಿದ್ದರು. ಬಹಳ ಸೆಖೆಯಿದ್ದ ಒಂದು ರಾತ್ರಿಯ ಸಮಯದಲ್ಲಿ ಅಬೂಅಫಕ್ ತನ್ನ ಮನೆಯ ಅಂಗಳದಲ್ಲಿ ಮಲಗಿದ್ದನು. ಆ ಸಹಾಬಿಗೆ ಇದರ ಸುದ್ದಿ ಮುಟ್ಟಿದಾಗ ಅವರು ಬೇಗನೇ ಹೊರಟರು. ಅಲ್ಲಿ ತಲುಪಿದ ನಂತರ ಅವರು ತನ್ನ ಖಡ್ಗವನ್ನು ಅಬೂಅಫಕಿನ ಯಕೃತ್ತಿನ ಮೇಲೆ ಇರಿಸಿ ಪೂರ್ಣವಾಗಿ ಒತ್ತಡ ಹಾಕಿದರು. ಕೊನೆಗೆ ಖಡ್ಗವು ಆತನ ಹೊಟ್ಟೆಯಿಂದ ಹಾದು ಹೋಗಿ ಹಾಸಿಗೆಗೆ ಮುಟ್ಟಿತು. ಅಲ್ಲಾಹನ ಶತ್ರುವಾದ ಅಬೂಅಫಕ್ ಭಯಾನಕವಾಗಿ ಕಿರುಚಿದನು. ಅವರು ಆತನನ್ನು ಅದೇ ಸ್ಥಿತಿಯಲ್ಲಿ ಬಿಟ್ಟು ಅಲ್ಲಿಂದ ಹೊರಟರು. ಆತನ ಕಿರುಚಾಟವನ್ನು ಕೇಳಿ ಜನರು ಆತನ ಕಡೆಗೆ ಓಡಿ ಬಂದರು ಮತ್ತು ಆತನ ಕೆಲವು ಗೆಳೆಯರು ಆತನನ್ನು ಕೂಡಲೇ ಎತ್ತಿಕೊಂಡು ಮನೆಯ ಒಳಗೆ ಕೊಂಡುಹೋದರು. ಆದರೆ ಅಲ್ಲಾಹನ ಶತ್ರು ಆ ಬಲವಾದ ಹಲ್ಲೆಯಿಂದ ಸತ್ತು ಹೋದನು.

(ಈ ಘಟನೆಯ ಬಗ್ಗೆ ವಿವರಿಸುತ್ತಾ ಹುಝೂರ್ ಹೇಳಿದರು:) ಈ ಘಟನೆ ಕೂಡ ಯಾವುದೇ ವಿಶ್ವಾಸಾರ್ಹವಾದ ಮೂಲಗಳಿಂದ ವರದಿಯಾಗಿಲ್ಲ. ಸಿಹಾಹ್ ಸಿತ್ತದಲ್ಲೂ ಇದನ್ನು ಪ್ರಸ್ತಾಪಿಸಲಾಗಿಲ್ಲ. ಜೀವನಚರಿತ್ರೆಯ ಕೆಲವು ಗ್ರಂಥಗಳಾದ ಸೀರತುಲ್ ಹಲಬಿಯ, ಶರಹ್ ಝುರ್‌ಖಾನಿ, ತಬ್‌ಖಾತುಲ್ ಕುಬ್ರಾ ಲಿಇಬ್ನು ಸಅದ್, ಸೀರತುನ್ನಬವಿಯಾ ಲಿಇಬ್ನು ಹಿಶಾಂ, ಅಲ್‌ಬದಾಯ ವನ್ನಹಾಯ, ಕಿತಾಬುಲ್‌ಮಗಾಝಿ, ಅಲ್‌ವಾಖದಿ, ಸುಬುಲುಲ್ ಹುದಾ ವರ್‍ರಿಶಾದ್ ಇತ್ಯಾದಿಗಳಲ್ಲಿ ಇದರ ಪ್ರಸ್ತಾಪವಿದೆ. ಆದರೆ ಚರಿತ್ರೆಯ ಇತರ ಪ್ರಸಿದ್ಧ ಗ್ರಂಥಗಳಾದ ಅಲ್‌ಕಾಮಿಲ್ ಫಿತ್ತಾರೀಖ್, ತಾರೀಖುತ್ತಬರೀ, ತಾರೀಖ್ ಇಬ್ನು ಖುಲ್‌ದೂನ್ ಇತ್ಯಾದಿಗಳಲ್ಲಿ ಈ ಘಟನೆಯ ಪ್ರಸ್ತಾಪವಿಲ್ಲ.

ಹಝ್ರತ್ ಪೈಗಂಬರ್(ಸ)ರೊಡನೆ ವೈರ ಮತ್ತು ಶತ್ರುತ್ವ ಉಂಟುಮಾಡುವಂತೆ ಆತನು ಜನರನ್ನು ಹುರಿದುಂಬಿಸುತ್ತಿದ್ದನು ಎಂಬುದಕ್ಕೆ ಜನರು ಸಾಕ್ಷ್ಯವಹಿಸಿದ್ದಾಗಿ ಈ ಘಟನೆಯ ಕುರಿತು ಕೂಡ ಅಸ್ಮಾಳ ಘಟನೆಯ ಹಾಗೆ ಹೇಳಲಾಗುತ್ತದೆ. ಬದ್ರ್ ಯುದ್ಧದ ನಂತರ ಈತನು ಇನ್ನಷ್ಟು ಹಗೆ ಮತ್ತು ಅಸೂಯೆಯಲ್ಲಿ ಮುಂದಾದನು ಮತ್ತು ಬಹಿರಂಗವಾದ ದಂಗೆಗಾರನಾಗಿದ್ದನು. ಅಬೂಅಫಕ್‌ನ ವಧೆಯ ಕುರಿತ ಈ ವರದಿಗಳ ಆಂತರಿಕ ವೈರುಧ್ಯಗಳು ಕೂಡ ಈ ಘಟನೆಯನ್ನು ಸಂದೇಹಾಸ್ಪದವನ್ನಾಗಿ ಮಾಡುತ್ತಿದೆ. ಉದಾಹರಣೆಗೆ ಮೊದಲನೆಯದಾಗಿ ಕೊಲೆಗಾರ ಯಾರು ಎಂಬುದರಲ್ಲಿ ಭಿನ್ನಾಭಿಪ್ರಾಯವಿದೆ. ಇಬ್ನು ಸಅದ್ ಮತ್ತು ವಾಖದಿಯ ಪ್ರಕಾರ ಅಬೂಅಫಕ್‌ನನ್ನು ವಧಿಸಿದ್ದು ಸಾಲಿಂ ಬಿನ್ ಉಮೈರ್ ಆಗಿದ್ದರು. ಆದರೆ ಕೆಲವು ಇತರ ವರದಿಗಳಲ್ಲಿ ಸಾಲಿಂ ಬಿನ್ ಅಮ್ರಿನ ಪ್ರಸ್ತಾಪವಿದೆ. ಅದೇ ವೇಳೆ ಇಬ್ನು ಉಖ್ಬರ ಪ್ರಸ್ತಾಪ ಸಾಲಿಂ ಬಿನ್ ಅಬ್ದುಲ್ಲಾಹ್ ಆತನನ್ನು ವಧಿಸಿದ್ದರು ಎಂದಾಗಿದೆ. ಎರಡನೆಯದಾಗಿ ಕೊಲೆಯ ಕಾರಣದಲ್ಲಿ ಭಿನ್ನಾಭಿಪ್ರಾಯವಿದೆ. ಇಬ್ನು ಹಿಶಾಂ ಮತ್ತು ವಾಖದಿಯ ಪ್ರಕಾರ ಸಾಲಿಂ ಸ್ವತಃ ಆವೇಶಗೊಂಡು ಆತನನ್ನು ಕೊಂದು ಹಾಕಿದರು. ಆದರೆ ಕೆಲವು ವರದಿಗಳ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಆದೇಶ ಅನುಸಾರ ಆತನನ್ನು ವಧಿಸಲಾಗಿತ್ತು. ಮೂರನೆಯದಾಗಿ ಆತನು ಯಾವ ಧರ್ಮದವನು ಎಂಬುದರಲ್ಲಿ ಸಹ ಭಿನ್ನಾಭಿಪ್ರಾಯವಿದೆ. ಇಬ್ನು ಸಅದ್‌ನ ಪ್ರಕಾರ ಅಬೂಅಫಕ್ ಯಹೂದಿ ಆಗಿದ್ದನು. ಆದರೆ ವಾಖದಿಯ ಪ್ರಕಾರ ಆತನು ಯಹೂದಿ ಆಗಿರಲಿಲ್ಲ. ಕೊಲೆ ಯಾವಾಗ ನಡೆದದ್ದು ಎಂಬುದರಲ್ಲೂ ಭಿನ್ನಾಭಿಪ್ರಾಯವಿದೆ. ವಾಖದಿ ಮತ್ತು ಇಬ್ನು ಸಅದ್ ಪ್ರಕಾರ ಈ ಘಟನೆ ಅಸ್ಮಾ ಬಿನ್ತ್ ಮರ್‌ವಾನಳ ಕೊಲೆಯ ನಂತರದ ಘಟನೆಯಾಗಿದೆ. ಆದರೆ

ಇಬ್ನು ಇಸ್‌ಹಾಖ್ ಮತ್ತು ಇಬ್ನು ಹಿಶಾಮ್ ಮುಂತಾದವರ ಪ್ರಕಾರ ಈ ಘಟನೆ ಅಸ್ಮಾಳ ಕೊಲೆಗಿಂತ ಮೊದಲು ನಡೆದ ಘಟನೆಯಾಗಿತ್ತು. ಈ ಸ್ಪಷ್ಟವಾದ ಭಿನ್ನಾಭಿಪ್ರಾಯಗಳಿಂದಲೂ ಇದು ಕಟ್ಟುಕಥೆಯಾಗಿತ್ತು ಹಾಗೂ ಇದರಲ್ಲಿ ಯಾವುದೇ ನೈಜತೆಯಿಲ್ಲ ಎಂದು ಸ್ಪಷ್ಟವಾಗುತ್ತದೆ.

ಅಬೂಅಫಕ್‌ನ ಕೊಲೆ ನಡೆದಿತ್ತು ಎಂದು ಅಂಗೀಕರಿಸುವುದಾದರೂ ಕೂಡ ಆತನ ಇತರ ಅಪರಾಧಗಳಾದ ಸಾಮ್ರಾಜ್ಯದ ನೇತಾರ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಪ್ರೇರೇಪಿಸುವುದು, ನಿಂದನೀಯ ಪದ್ಯಗಳನ್ನು ಹಾಡಿ ಯುದ್ಧ ಮಾಡಲು ಪ್ರೇರೇಪಿಸುವುದು, ಸಾರ್ವಜನಿಕ ನೆಮ್ಮದಿಯನ್ನು ಕೆಡಿಸುವುದು, ಯುದ್ಧದ ಬೆಂಕಿಯನ್ನು ಹೊತ್ತಿಸುವುದು ಮುಂತಾದ ಕೃತ್ಯಗಳೇ ಆತನ ಮರಣದಂಡನೆಗೆ ಸಾಕಾಗಿತ್ತು. ಸರ್ಕಾರದ ವಿರುದ್ಧ ದಂಗೆ ಮಾಡಿದ್ದಾಗಿ ಸಾಬೀತಾದರೆ ಇಂದು ಕೂಡ ಮರಣದಂಡನೆ ವಿಧಿಸಲಾಗುತ್ತದೆ. ಆತನ ಅವಾಚ್ಯ ಮಾತುಗಳು ಮಾತ್ರ ಆತನನ್ನು ವಧಿಸಲು ಕಾರಣವಾಗಲಾರದು. ಅದೇ ರೀತಿಯಲ್ಲಿ, ಅಸ್ಮಾಳ ಘಟನೆಯ ಹಾಗೆ ಇಲ್ಲೂ ಸಹ ಅಬೂಅಫಕ್‌ನ ಕೊಲೆಯ ನಂತರ ಯಹೂದಿಯರ ಯಾವುದೇ ಪ್ರತಿಕ್ರಿಯೆ ವರದಿಯಾಗಿಲ್ಲ. ಒಟ್ಟಿನಲ್ಲಿ ಯಹೂದಿಯರು ಸುಮ್ಮನಿದ್ದರು ಎಂಬುದು ಈ ಘಟನೆ ಕಟ್ಟುಕಥೆ ಎಂಬುದಕ್ಕೆ ಖಚಿತವಾದ ಪುರಾವೆಯಾಗಿದೆ.

ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಈ ಘಟನೆಗಳು ನಡೆದದ್ದು ಬದ್ರ್ ಯುದ್ಧಕ್ಕಿಂತ ಮೊದಲು ಅಥವಾ ತುಸು ನಂತರವೆಂದು ಹೇಳಲಾಗುತ್ತದೆ. ಮುಸ್ಲಿಮರ ಮತ್ತು ಯಹೂದಿಯರ ಮೊದಲ ಯುದ್ಧ ಬನೂ ಖೈನ್‌ಖಾಅ್ ಸಮರವಾಗಿತ್ತು ಎಂಬುವುದು ಎಲ್ಲ ಚರಿತ್ರೆಗಾರರ ಒಮ್ಮತಾಭಿಪ್ರಾಯವಾಗಿದೆ. ಬದ್ರ್ ಯುದ್ಧಕ್ಕಿಂತ ಮೊದಲು ಈ ಘಟನೆ ನಡೆದಿದ್ದರೆ ಬದ್ರ್ ಯುದ್ಧದ ಪ್ರಸ್ತಾಪದ ಜೊತೆಗೆ ಈ ಘಟನೆಯ ಬಗ್ಗೆ ಯಹೂದಿಯರು ಖಂಡಿತವಾಗಿಯೂ ಹೇಳುತ್ತಿದ್ದರು. ಅಬೂಅಫಕ್ ಮತ್ತು ಅಸ್ಮಾಳ ಕೊಲೆಯ ಘಟನೆಗಳ ಆಧಾರದಲ್ಲಿ, ಮುಸ್ಲಿಮರೇ ಮೊದಲು ಅತಿಕ್ರಮ ಮಾಡಿದ್ದು ಎಂದು ಯಹೂದಿಯರು ಮುಸ್ಲಿಮರ ಮೇಲೆ ಆಕ್ಷೇಪ ಎತ್ತಬಹುದಾಗಿತ್ತು. ಆದರೆ ಮದೀನದ ಯಹೂದಿಗಳು ಈ ಘಟನೆಗಳ ಬಗ್ಗೆ ಎಂದಾದರೂ ಪ್ರಶ್ನಿಸಿದ್ದಾಗಿ ಅಥವಾ ಈ ಘಟನೆಗಳ ಕುರಿತು ಗದ್ದಲವೆಬ್ಬಿಸಿದ್ದಾಗಿ ಯಾವುದೇ ಪ್ರಸ್ತಾಪ ಯಾವುದೇ ಚರಿತ್ರೆಯಲ್ಲಿ, ಎಲ್ಲಿಯ ವರೆಗೆ ಎಂದರೆ, ಈ ಕತೆಯನ್ನು ವರದಿ ಮಾಡಿರುವ ಈ ಚರಿತ್ರೆಗಾರರ ಗ್ರಂಥಗಳಲ್ಲೂ ಇಲ್ಲ.

ಬಹುಶಃ ಯಹೂದಿಗಳು ಆಕ್ಷೇಪವೆತ್ತಿರಬಹುದು, ಆದರೆ ಮುಸ್ಲಿಂ ಚರಿತ್ರೆಗಾರರು ಅದರ ಬಗ್ಗೆ ಪ್ರಸ್ತಾಪಿಸಿಲ್ಲವೆಂದು ಯಾರಾದರೂ ಭಾವಿಸುವುದಾದರೆ ಅದೊಂದು ತಪ್ಪು ಮತ್ತು ಆಧಾರರಹಿತ ಯೋಚನೆಯಾಗಿದೆ. ಏಕೆಂದರೆ ಎಂದಿಗೂ ಯಾವನೇ ಮುಸ್ಲಿಂ ಹದೀಸ್ ಪಂಡಿತ ಅಥವಾ ಚರಿತ್ರೆಗಾರ ವಿರೋಧಿಗಳ ಯಾವುದೇ ಆಕ್ಷೇಪವನ್ನು ಮರೆಮಾಚಿರಲಿಲ್ಲ. ಉದಾಹರಣೆಗೆ ನಖ್ಲ ಯುದ್ಧದ ಘಟನೆಯಲ್ಲಿ ಪರಿಶುದ್ಧ ಮಾಸಗಳಿಗೆ ಮುಸ್ಲಿಮರು ಬೆಲೆಕೊಡಲಿಲ್ಲವೆಂದು ಮಕ್ಕದ ಮುಶ್ರಿಕರು ಆಕ್ಷೇಪವೆತ್ತಿದ್ದರು. ಮುಸ್ಲಿಂ ಚರಿತ್ರೆಗಾರರು ಪರಿಪೂರ್ಣ ಪ್ರಾಮಾಣಿಕತೆಯಿಂದ ಅವರ ಆಕ್ಷೇಪಗಳನ್ನು ತಮ್ಮ ಗ್ರಂಥಗಳಲ್ಲಿ ನಮೂದಿಸಿದರು. ಆದ್ದರಿಂದ ಈ ವಿಷಯದಲ್ಲೂ ಯಹೂದಿಯರು ಏನಾದರೂ ಆಕ್ಷೇಪವೆತ್ತಿದ್ದರೆ ಚರಿತ್ರೆಯಲ್ಲಿ ಅದರ ಪ್ರಸ್ತಾಪ ಇಲ್ಲದೇ ಇರುತ್ತಿರಲಿಲ್ಲ. ಒಟ್ಟಿಲ್ಲಿ, ಯಾವ ರೀತಿಯಲ್ಲಿ ನೋಡಿದರೂ ಈ ಕಥೆ ಸರಿಯೆಂದು ಸಾಬೀತಾಗುವುದಿಲ್ಲ. ಯಾರೋ ರಹಸ್ಯ ಶತ್ರುವು ಮುಸ್ಲಿಮನಾದ ಒಬ್ಬನ ಮೇಲೆ ಈ ಅಪರಾಧವನ್ನು ಹೊರಿಸಿಕೊಂಡು ಈ ಕಥೆಯನ್ನು ಹಣೆದಿರಬಹುದು. ಅನಂತರ ಅದು ಮುಸ್ಲಿಮರ ವರದಿಗಳಲ್ಲಿ ಪ್ರವೇಶಿಸಿತು. ಅಥವಾ ಯಾವನೋ ದುರ್ಬಲ ಮುಸ್ಲಿಮನು ತನ್ನ ಗೋತ್ರದ ಕಡೆಯಿಂದ ಜಂಬಕೊಚ್ಚಿಕೊಳ್ಳಲು ಆತನಿಗೆ ಸಂಬಂಧಪಟ್ಟ ವ್ಯಕ್ತಿಗಳು ಕೆಲವು ಅಪಾಯಕಾರಿ ಸತ್ಯನಿಷೇಧಿಗಳನ್ನು ಕೊಂದಿದ್ದರು ಎಂಬ ವರದಿಗಳನ್ನು ಚರಿತ್ರೆಯಲ್ಲಿ ಸೇರಿಸಿರಬಹುದು. ಅಲ್ಲಾಹನೇ ಬಲ್ಲನು.

ಅಸ್ಮಾ ಮತ್ತು ಅಬೂಅಫಕ್‌ನ ಕಟ್ಟುಕಥೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯುತ್ತಾರೆ: ಬದ್ರ್ ಯುದ್ಧದ ಸ್ಥಿತಿಗತಿಗಳ ನಂತರ ವಾಖಿದಿ ಮತ್ತು ಇತರ ಕೆಲವು ಚರಿತ್ರೆಗಾರರು ಹದೀಸಿನ ತಮ್ಮ ಗ್ರಂಥಗಳಲ್ಲಿ ಪ್ರಬಲವಾದ ಚಾರಿತ್ರಿಕ ವರದಿಗಳಲ್ಲಿ ಇಲ್ಲದ ಎರಡು ವರದಿಗಳನ್ನು ಬರೆದಿರುವರು. ಬುದ್ಧಿಪರವಾಗಿ ಯೋಚಿಸಿದರೂ ಅವುಗಳು ಸರಿಯೆಂದು ಸಾಬೀತಾಗುವುದಿಲ್ಲ. ಆದರೆ ಇವುಗಳಿಂದ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಆಕ್ಷೇಪ ಮಾಡಲು ಒಂದು ಬಾಹ್ಯವಾದ ಕಾರಣ ಲಭಿಸುವುದರಿಂದ ಕೆಲವು ಕ್ರೈಸ್ತ ಚರಿತ್ರೆಗಾರರು ಅವರ ಮಾಮೂಲಿನ ಅಭ್ಯಾಸದ ಪ್ರಕಾರ ಇವುಗಳನ್ನು ಪ್ರಸ್ತಾಪಿಸಿರುವರು. ಆದರೆ ಸತ್ಯವೇನೆಂದರೆ, ವಿಶ್ಲೇಷಣೆ ನಡೆಸಿದರೆ ಈ ಘಟನೆಗಳು ಸರಿಯೆಂದು ಸಾಬೀತಾಗುವುದಿಲ್ಲ.

ಇದು ಸರಿಯಲ್ಲವೆಂದು ಸಂಶಯ ಉಂಟಾಗಲು ಇರುವ ಮೊದಲ ಪುರಾವೆ ಏನೆಂದರೆ, ಹದೀಸಿನ ಗ್ರಂಥಗಳಲ್ಲಿ ಈ ಘಟನೆಗಳ ಪ್ರಸ್ತಾಪವಿಲ್ಲ. ಹದೀಸುಗಳು ಮಾತ್ರವಲ್ಲ, ಕೆಲವು ಚರಿತ್ರೆಗಾರರು ಕೂಡ ಇದರ ಪ್ರಸ್ತಾಪವನ್ನು ಮಾಡಿಲ್ಲ. ಈ ರೀತಿಯ ಘಟನೆಗಳು ನಿಜವಾಗಿಯೂ ನಡೆದಿದ್ದರೆ, ಹದೀಸಿನ ಗ್ರಂಥಗಳಲ್ಲಿ ಮತ್ತು ಕೆಲವು ಚರಿತ್ರೆಯ ಗ್ರಂಥಗಳಲ್ಲಿ ಇವುಗಳ ಪ್ರಸ್ತಾಪ ಇಲ್ಲದೇ ಇರಲು ಕಾರಣವಿಲ್ಲ. ಈ ಘಟನೆಗಳಿಂದ ಬಾಹ್ಯವಾಗಿ ನೋಡುವುದಾದರೆ ಹಝ್ರತ್ ಪೈಗಂಬರ್(ಸ)ರ ಮತ್ತು ಅವರ ಸಹಾಬಿಯರ ವಿರುದ್ಧ ಅಲ್ಪಮಟ್ಟದ ಆಕ್ಷೇಪ ಉಂಟಾಗುವ ಕಾರಣದಿಂದ ಹದೀಸಿನ ಪಂಡಿತರು ಮತ್ತು ಕೆಲವು ಚರಿತ್ರೆಗಾರರು ಅವುಗಳ ಪ್ರಸ್ತಾಪವನ್ನು ಕೈಬಿಟ್ಟಿರುವರು ಎಂದು ಸಂದೇಹಪಡಲೂ ಸಾಧ್ಯವಲ್ಲ. ಏಕೆಂದರೆ ಮೊದಲನೆಯದಾಗಿ ಈ ಘಟನೆಗಳು ಆ ಸ್ಥಿತಿಗಳನ್ನು ಮುಂದಿರಿಸಿ ನೋಡುವುದಾದರೆ ಆಕ್ಷೇಪಾರ್ಹವಲ್ಲ. ಎರಡನೆಯದಾಗಿ ಇಸ್ಲಾಮಿಗೆ ಮತ್ತು ಇಸ್ಲಾಮಿನ ಸ್ಥಾಪಕರ ಮೇಲೆ ಆಕ್ಷೇಪ ಉಂಟಾಗುವುದು ಎಂಬ ಕಾರಣದಿಂದ ಮಾತ್ರ ಮುಸ್ಲಿಮ್ ಹದೀಸ್ ಪಂಡಿತರು ಮತ್ತು

ಚರಿತ್ರೆಗಾರರು ಎಂದಿಗೂ ಯಾವುದೇ ವರದಿಯನ್ನು ಪ್ರಸ್ತಾಪಿಸದೇ ಇರಲಿಲ್ಲ ಎಂದು ಹದೀಸ್ ಮತ್ತು ಚರಿತ್ರೆಗಳನ್ನು ಅಲ್ಪವಾದರೂ ಓದುವ ವ್ಯಕ್ತಿಗೆ ಗೊತ್ತಾಗದ ಸಂಗತಿಯಲ್ಲ. ಕಾರಣವೇನೆಂದರೆ, ವರದಿಗಳ ಪ್ರಕಾರ ಸರಿಯೆಂದು ತೋರುವ ಸಂಗತಿಯನ್ನು ಅದರಲ್ಲಿ ಅಡಕವಾಗಿರುವ ವಿಷಯ ಸರಿಯಲ್ಲವೆಂಬ ಕಾರಣದಿಂದ ಹದೀಸ್ ಪಂಡಿತರು ಅವುಗಳನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಲು ಕಿಂಚಿತ್ತೂ ಹಿಂದೆ ಸರಿಯುತ್ತಿರಲಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಸಂಗತಿಯ ಬಗ್ಗೆ ವಿರೋಧವನ್ನು ತೋರಿಸುವ ಮಿಸ್ಟರ್ ಮಾರ್ಗೋಲೀಸ್‌ನಂತಹ ಒರಿಯನ್ಟಲಿಸ್ಟ್ ಕೂಡ ಈ ಘಟನೆಗಳ ಕಾರಣದಿಂದ ಮುಸ್ಲಿಮರ ಮೇಲೆ ಆಕ್ಷೇಪವೆತ್ತಿಲ್ಲ.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರಿಗೆ ಸಂಬಂಧಿಸಿ ಹೇಳಿರುವ ಇವೆಲ್ಲವೂ ಕಟ್ಟುಕಥೆಗಳಾಗಿವೆ. ಇವುಗಳನ್ನು ಬರೆದ ಚರಿತ್ರೆಗಾರರು, ಅದನ್ನು ಸರಿಯಾಗಿ ವಿಶ್ಲೇಷಣೆ ನಡೆಸಬೇಕಾಗಿತ್ತು. ಅಲ್ಲಾಹನು ನಮಗೆ ಕಾಲಘಟ್ಟದ ಇಮಾಮರನ್ನು ನಂಬಲು ಸೌಭಾಗ್ಯ ನೀಡಿದನು ಎಂಬುದು ಅಲ್ಲಾಹನ ಔದಾರ್ಯವಾಗಿದೆ. ಅದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಆದ್ದರಿಂದ ನಾವು ಪ್ರತಿಯೊಂದು ಸಂಗತಿಯನ್ನು ನೋಡಿ, ವಿಶ್ಲೇಷಣೆ ನಡೆಸಿ ಮತ್ತು ಅದರ ಸತ್ಯತೆಯನ್ನು ಮನವರಿಕೆ ಮಾಡಿಕೊಂಡು ವಿವರಿಸಲು ಪ್ರಯತ್ನಿಸುತ್ತೇವೆ. ಹಝ್ರತ್ ಪೈಗಂಬರ್(ಸ)ರ ಮೇಲೆ ಉಂಟಾಗುವ ಇಂತಹ ಆರೋಪಗಳಿಗೆ ಪ್ರತ್ಯುತ್ತರ ನೀಡಲು ನಾವು ಪ್ರಯತ್ನಿಸುತ್ತೇವೆ. ಇಂತಹ ಸಂಗತಿಗಳನ್ನು ಪ್ರಚಾರ ಮಾಡಿ ಕೇವಲ ತಮ್ಮ ಸ್ವಾರ್ಥ ಉದ್ದೇಶಗಳನ್ನು ಪಡೆಯುವ ಮತ್ತು ಇಸ್ಲಾಮಿಗೆ ಕೆಟ್ಟ ಹೆಸರು ಕೊಡಲು ಪ್ರಯತ್ನಿಸುವ ಈ ಉಲೆಮಾಗಳಿಗೆ ಅಲ್ಲಾಹನು ಬುದ್ಧಿ ನೀಡಲಿ. ಅವರು ಇಸ್ಲಾಮಿನ ಸೇವೆ ಮಾಡುತ್ತಿದ್ದಾರೆ ಎಂದು ಹೆಸರಿಗೆ ಹೇಳಬಹುದು. ಆದರೆ ಸತ್ಯದಲ್ಲಿ ಅವರ ಕೃತ್ಯಗಳೇ ಮುಸ್ಲಿಮರಲ್ಲಿ ತೀವ್ರತೆ ಉಂಟಾಗಲು ಕಾರಣವಾಗಿದೆ. ಅಲ್ಲಾಹನು ಅವರಿಗೂ ಬುದ್ಧಿ ನೀಡಲಿ.

(ಹುಝೂರ್ ಕೊನೆಗೆ ನಾಲ್ವರು ದಿವಂಗತರ ಬಗ್ಗೆ ಹೇಳಿದರು ಮತ್ತು ಅವರು ಜಮಾಅತಿಗೆ ನೀಡಿದ ಸೇವೆಗಳ ಬಗ್ಗೆ ಪ್ರಸ್ತಾಪಿಸಿ ಜುಮಾ ನಮಾಝಿನ ನಂತರ ಅವರ ಜನಾಝ ಗ್ಹಾಯಿಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّاٰتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak'**, Islamabad, Tilford, UK.* On 06-10-2023
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon